Mr.Speaker : The Minister has assured that he would examine this again.

ಬೆಂಗಳೂರು ನಗರದ ನಂದಿನಿ ಬಡಾವಣೆಯಲ್ಲಿನ ಬಸ್‌ನಿಲ್ದಾಣ ಕುರಿತು.

361 - ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ನಂದಿನಿ ಬಡವಾಣೆಯಲ್ಲಿ ಇತ್ತೀಚೆಗೆ ಸಿಟಿ ಬಸ್ ನಿಲ್ದಾಣ ಮಾಡಲು ಜಾಗವನ್ನು ಸಮ ಮಟ್ಟ ಮಾಡಲಾಗಿದ್ದು ಆ ಜಾಗದಲ್ಲಿ ಬಸ್ ನಿಲ್ಲಲು ಟಾರನ್ನು ಯಾವಾಗ ಹಾಕಲಾಗುವುದು?

ಆ) ಸದರಿ ಬಸ್ ನಿಲ್ದಾಣದಲ್ಲಿ ಜನರು ನಿಂತುಕೊಳ್ಳಲು ಬೇಕಾಗುವಂತಹ ಶಾಶ್ವತವಾದ ಶೆಡ್ಡನ್ನು ಶೆಲ್ಟರನ್ನು ಇನ್ನೆಷ್ಟು ದಿನಗಳಲ್ಲಿ ಕಟ್ಟಿಸಿ ಕೊಡಲಾಗುವುದು ಮತ್ತು ಹೊಸ ಬಸ್ಸಿಲ್ದಾಣದಿಂದ ಸಿಟಿ ಬಸ್ ಸಂಚಾರ ಎಂದಿನಿಂದ ಪ್ರಾರಂಭವಾಗುವುದು.

ಇ) ಕಛೇರಿ ವೇಳೆಯಲ್ಲಿ ನೌಕರರಿಗೆ ಕಛೇರಿಗೆ ಹೋಗಿ ಬರಲು ಅನುಕೂಲವಾಗುವಂತೆ ಹೆಚ್ಚು. ಪಿ.ಹೆಚ್.ಎಸ್. ಬಸ್ಸುಗಳನ್ನು ಓಡಿಸಲು ಸರ್ಕಾರ ವ್ಯವಸ್ಥೆ ಮಾಡುವುದೇ?

ಈ) ಅನುಕೂಲಗಳನ್ನು ನಂದಿನಿ ಬಡಾವಣೆ: ಸುತ್ತ ಮುತ್ತಲಿನ ಪ್ರದೇಶಗಳ ಜನರಿಗೆ ಆದಷ್ಟು ಜಾಗ್ರತೆಯಾಗಿ ಸರ್ಕಾರ ಮಾಡಿಕೊಡುವುದೇ?

ಉ) ಹಾಗಿದ್ದಲ್ಲಿ ಇನ್ನೆಷ್ಟು ದಿನಗಳಲ್ಲಿ ಮಾಡಿ ಕೊಡಲಾಗುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಆವರಣವನ್ನು ಸಮ ಮಟ್ಟ ಮಾತ್ರ ಮಾಡಲಾಗಿದೆ. ಡಾಂಬರು ಹಾಕುವ ಮುನ್ನ ನೆಲವನ್ನು ಘಟ್ಟನೆ ಮಾಡಬೇಕಾಗುತ್ತದೆ. ಈ ಕೆಲಸ ತೆಗೆದುಕೊಂಡು ಘಟ್ಟನೆ ಜಾಗವನ್ನು ಒಂದು ವರ್ಷ ಉಪಯೋಗಿಸಿದ ನಂತರ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ಟಾರು ಹಾಕಲು ಕ್ರಮ ತೆಗೆದುಕೊಳ್ಳಲಾಗುವುದು.

ಆ) 1994-95ನೇ ಸಾಲಿನಲ್ಲಿ

ಇ) ಪರಿಗಣಿಸಲಾಗುವುದು.

ಈ) ಅನುಕೂಲತೆಗಳನ್ನು ಮಾಡಿ ಕೊಡಲಾಗುವುದು.

ಉ) 19994-95ನೇ ಸಾಲಿನಲ್ಲಿ

ಶ್ರೀ ಎಂ. ಶ್ರೀನಿವಾಸಯ್ಯ : ಮಾನ್ಯ ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನಂದಿನಿ ಬಡಾವಣೆಯಲ್ಲಿ ನೆಲವನ್ನು ಸಮತಟ್ಟುಮಾಡಿ ಒಂದು ವರ್ಷ ಕಾಲ ಆದಮೇಲೆ ಅದರ ಮೇಲೆ ಬಸ್ಸುಗಳು ಓಡಾಡಿದ ಮೇಲೆ ನಾವು ಟಾರು ಹಾಕುತ್ತೇವೆಂದು ಹೇಳಿದ್ದಾರೆ. ಟಾರು ಹಾಕಬೇಕಾದರೆ ಒಂದು ವರ್ಷ ತೆಗೆದುಕೊಳ್ಳಲಿ. ಆದರೆ ಅವರೇನು ಹೇಳಿದ್ದಾರೆಂದರೆ, ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಾವು ಟಾರು ಹಾಕುತ್ತೇವೆಂದು ಹೇಳಿದ್ದಾರೆ. ಅದನ್ನು ದಯವಿಟ್ಟು ಸಡಿಲಿಸಬೇಕು. ಆದಷ್ಟುಬೇಗ ಟಾರು ಹಾಕಿಸಿಕೊಡಬೇಕೆಂದು ತಮ್ಮಲ್ಲಿ ನಾನುಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಬಿಡಿಎಯಿಂದ ನಾವು 38 ಗುಂಟೆ ಭೂಮಿಯನ್ನು ತೆಗೆದುಕೊಂಡಿದ್ದೇವೆ. ನಾವು ಲೆವಲಿಂಗ್ ಮಾಡಿದ್ದೇವೆ. ಹಾಸ್ಪಾಲ್ಟಿಂಗ್ ಮಾಡಬೇಕಾದರೆ ಒಂದು ಸೀಸನ್ ಹೋಗಬೇಕಾಗುತ್ತದೆ. ಒಂದು ಮಳೆಗಾಲ ಹೋಗದೆ ನಾವು ಮಾಡುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಈ ಮಳೆಗಾಲದ ನಂತರ ನಾವು ತೆಗೆದುಕೊಳ್ಳುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಡುತ್ತಿದ್ದೇನೆ. ಮುಂದಿನ ವರ್ಷ 1994-95ರಲ್ಲಿ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಶ್ರೀನಿವಾಸಯ್ಯ : ಮಾನ್ಯ ಅಧ್ಯಕ್ಷರೆ, ಒಂದು ವರ್ಷ ಟೈಮ್ ತೆಗೆದುಕೊಳ್ಳಲಿ. ಆದರೆ ಆರ್ಥಿಕ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಆ ಆರ್ಥಿಕ ಪರಿಸ್ಥಿತಿಯನ್ನು ಸಡಿಲಗೊಳಿಸಿ ಆದಷ್ಟು ಬೇಗ ಟಾರ್ ಹಾಕಬೇಕೆಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಭೀಮಣ್ಣಖಂಡ್ರೆ : ಬೇಗ ಮಾಡುತ್ತೇವೆ. ಮಾನ್ಯ ಸದಸ್ಯರು ಮತ್ತೊಂದು ಮಾತು ಹೇಳಿದ್ದಾರೆ. ಪಿಹೆಚ್ಎಸ್ ಬಸ್ಗಳನ್ನು ಓಡಿಸುವ ಅವಶ್ಯಕತೆ ಇಲ್ಲ, ಎಲ್ಲ ರೆಗ್ಯುಲರ್ ಬಸ್ಸುಗಳನ್ನು ಕಂಟಿನ್ಯೂ ಮಾಡುತ್ತಿದ್ದೇವೆ. ಶಿವಾಜಿನಗರ-ಬೆಂಗಳೂರು ಬಸಸ್ಟ್ಯಾಂಡ್, ಸಿಟಿಮಾರ್ಕೆಟ್ಗೆ ಬಸ್ಗಳು ಓಡಾಡುತ್ತಿವೆ. ಇವೆಲ್ಲ ಆರ್ಡಿನರಿ ಬಸ್ ಇದ್ದ ಕಾರಣ it is not necessary to introduce the PHS there at present.

ಪೋಲೀಸ್ ಇಲಾಖೆಯನ್ನು ನವೀಕರಣಗೊಳಿಸುವುದರ ಬಗ್ಗೆ

6 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಕರ್ನಾಟಕ ರಾಜ್ಯದಲ್ಲಿ ಪೊಲೀಸ್ ಇಲಾಖೆಯನ್ನು ನವೀಕರಣಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?*

ಆ) *ಧರ್ಮವೀರ ಸಮಿತಿಯ ವರದಿಯನ್ನು ಜಾರಿಗೆ ತರಲು ಸರ್ಕಾರವು ಒಪ್ಪಿದೆಯೇ ?*

ಇ) *ಪೊಲೀಸ್ ಇಲಾಖೆಯಲ್ಲಿ ದಕ್ಷತೆ ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?*

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ನವೀಕರಣಗೊಳಿಸಲು ಈ ಕೆಳಗಿನ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ.

1) ಕಡಿಮೆ ಸಿಬ್ಬಂದಿ ಬಲವಿರುವ 260 ಪೊಲೀಸ್ ಠಾಣೆಗಳಿಗೆ 4,124 ಹುದ್ದೆಗಳನ್ನು ಈಗಾಗಲೇ ಹಂಚಲಾಗಿದೆ. ಉಳಿದ 302 ಪೊಲೀಸ್ ಠಾಣೆಗಳಿಗೆ ದಿನಾಂಕ : 1-4-1994 ರಿಂದ ಜಾರಿಗೆ ಬರುವಂತೆ 2,218 ಹುದ್ದೆಗಳನ್ನು ಸಹ ಹಂಚಲಾಗಿದೆ.

2) 1992-93ರಲ್ಲಿ ಹಾಗೂ 1993-94ರಲ್ಲಿ ಎರಡೆರಡರಂತೆ ಕೆ.ಎಸ್.ಆರ್.ಪಿ. ಬೆಟಾಲಿಯನ್ಗಳನ್ನು ಮಂಜೂರು ಮಾಡಿದ್ದುಅವುಗಳು ಮಂಗಳೂರು, ಶಿವಮೊಗ್ಗ, ಬೆಂಗಳೂರಿನ ಯಲಹಂಕ ಹಾಗೂ ಧಾರವಾಡ ಶಿಗ್ಗಾವಿಯಲ್ಲಿ ಸ್ಥಾಪಿಸಲಾಗುತ್ತದೆ.

3) 1992-93 ಮತ್ತು 1993-94ನೇ ಸಾಲಿನಲ್ಲಿ ಒಟ್ಟು 32 ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದೆ. ಇದು ಇಲ್ಲದೆ ಬೆಂಗಳೂರು ನಗರ, ಮೈಸೂರು ನಗರ, ಹುಬ್ಬಳ್ಳಿ-ಧಾರವಾಡ ಮತ್ತು ಮಂಗಳೂರಿನಲ್ಲಿ ತಲಾ ಒಂದರಂತೆ ಮಹಿಳಾ ಪೊಲೀಸ್ ಠಾಣೆಗಳನ್ನು ಸಹ ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ.

4) ರಾಜ್ಯದಲ್ಲಿರುವ ಪೊಲೀಸ್ ಉಪವಿಭಾಗ ಮತ್ತು ಪೊಲೀಸ್ ವೃತ್ತಗಳನ್ನು ಪುನರ್ವಿಂಗಡಣೆ ಮಾಡಲಾಗಿದೆ. ಈ ವಿಂಗಡನೆಗಾಗಿ 51 ಡಿ.ಎಸ್.ಪಿ.ಗಳ ಹಾಗೂ 131 ಪೊಲೀಸ್ ಇನ್ಸ್ಪೆಕ್ಟರ್ ಹುದ್ದೆಗಳನ್ನು ಸಹ ಸೃಜಿಸಲಾಗಿದೆ.

5) ಅಪರಾಧಗಳನ್ನು ವೈಜ್ಞಾನಿಕ ವಿಧಾನದಲ್ಲಿ ಪತ್ತೆ ಹಚ್ಚಲು ಈಗಾಗಲೇ ಇರುವ ವಿಧಿವಿಜ್ಞಾನ ಪ್ರಯೋಗಶಾಲೆಗಳ ಜೊತೆಗೆ ಮಂಗಳೂರು ಹಾಗೂ ದಾವಣಗೆರೆಯಲ್ಲಿ ತಲಾ ಒಂದರಂತೆ ವಿಧಿ ವಿಜ್ಞಾನ ಪ್ರಯೋಗ ಶಾಲೆಗಳನ್ನು ಮಂಜೂರು ಮಾಡಲಾಗಿದೆ.

6)1991-92ನೇ ಸಾಲಿನಲ್ಲಿ ಪೊಲೀಸ್ ಇಲಾಖೆಯ ಆಧುನೀಕರಣ ಯೋಜನೆಯಡಿಯಲ್ಲಿ ಭಾರತ ಸರ್ಕಾರದಿಂದ 1,44,54,294 ರೂ.ಗಳನ್ನು ಸಹಾಯ ಧನ ರೂಪದಲ್ಲಿ (ಈ